## 5. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಮಂಜರಿಕೊಪ್ಪ, ಶಿವಮೊಗ್ಗ

### ಮನಸ್ಸಿದ್ದರೆ ಮಾರ್ಗ, ಒಳ್ಳೆಯ ಹವ್ಯಾಸ ಹಾಗೂ ಆಸಕ್ತಿ, ಉತ್ತಮ ಸಹಕಾರ

ಈ ಮೂರು ಅಂಶಗಳು. ಸ.ಹಿ.ಪ್ರಾ.ಶಾಲೆ, ಮಂಜರಿಕೊಪ್ಪ, ಮಲೇಶಂಕರ ಗ್ರಾಮ ಶಾಲೆಯು ಸುಂದರ. ಸ್ವಚ್ಛ ಪರಿಸರ ಹೊಂದಲು ಕಾರಣವಾಗಿದೆ. ಉತ್ತಮ ಪರಿಸರ. ಉತ್ತಮ ಆರೋಗ್ಯ ಎನ್ನುವಂತೆ ಶಾಲೆಯ ಮುಂಭಾಗದಲ್ಲಿ ಹಚ್ಚ ಹಸಿರಿನಿಂದ ಕೂಡಿದ ಸುಂದರವಾದ ಕೈತೋಟ ನಿರ್ಮಾಣಗೊಂಡಿದೆ. ಮಕ್ಕಳಿಗೆ ಕುಡಿಯಲು ಶುದ್ಧ ನೀರಿನ ಘಟಕ, ಕೈತೊಳೆಯುವ ನಲ್ಲಿ ವ್ಯವಸ್ಥೆ, ಜೋಕಾಲಿ, ಕುಳಿತು ಓದಲು ಕುಟೀರ, ಉತ್ತಮ ನಲಿಕಲಿ ವ್ಯವಸ್ಥೆ, ಶಾಲೆಯ ಸುತ್ತ ಕಾಂಪೌಂಡ್ ನಿರ್ಮಾಣ. 150 ರಿಂದ 200 ವಿಧದ ರೀತಿಯ ಸಸ್ಯಗಳು ನಮ್ಮ ಶಾಲೆಯಲ್ಲಿ ಇರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ನಿರ್ಮಾಣಕ್ಕೆ ಶ್ರಮಿಸಿದ ಶಾಲಾ ಸಿಬ್ಬಂದಿ ವರ್ಗ, ಎಸ್.ಡಿ.ಎಮ್.ಸಿ ಅಧ್ಯಕ್ಷರು, ಸದಸ್ಯರು, ಪೋಷಕರು, ಗ್ರಾಮಸ್ಥರು, ಮಕ್ಕಳು ನಮ್ಮ ಇಲಾಖೆಗೆ, ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶಾಲೆ ಬೆಳೆದು ಬಂದದಾರಿ:–** ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ತಾಲ್ಲೂಕಿನ ಮಲೆನಾಡಿನ ಮಡಿಲಿನಲ್ಲಿರುವ ಪುಟ್ಟಗ್ರಾಮ ಮಲೆಶಂಕರ ಗ್ರಾಮದಲ್ಲಿ 1967ನೇ ಇಸವಿಯಲ್ಲಿ ಸ.ಹಿ.ಪ್ರಾ.ಶಾಲೆ. ಮಂಜರಿಕೊಪ್ಪ, ಮಲೆಶಂಕರ ಗ್ರಾಮ ಶಾಲೆಯು ಜಿಲ್ಲಾ ಕೇಂದ್ರಸ್ಥಾನದಿಂದ  ಹಾಗೂ ತಾಲ್ಲೂಕು ಕೇಂದ್ರಸ್ಥಾನದಿಂದ ಸುಮಾರು 30 ಕಿ.ಮೀ. ದೂರದಲ್ಲಿದ್ದು 2017–18ಕ್ಕೆ 50ನೇ ವರ್ಷದ ಸುವರ್ಣ ಮಹೋತ್ಸವ ಆಚರಿಸಿಕೊಂಡಿದೆ.

ಶಾಲೆಯು ಸುಂದರ, ಸ್ವಚ್ಛ ಪರಿಸರದಿಂದ ಕಂಗೊಳಿಸುತ್ತಿದ್ದು ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವಲ್ಲಿ ಶಾಲಾ ಶಿಕ್ಷಕರು ಎಸ್.ಡಿ.ಎಂ.ಸಿ ಸದಸ್ಯರು ಮಕ್ಕಳನ್ನೊಳಗೊಂಡು ಎಲ್ಲರ ಅವಿರತ ಶ್ರಮದಿಂದ ಶಾಲೆಯು ಪ್ರಾರಂಭದಲ್ಲಿ 1 ರಿಂದ 4 ನೇ ತರಗತಿಯವರೆಗೆ ಇದ್ದು ಒಬ್ಬರು ಶಿಕ್ಷಕರನ್ನು ಮಾತ್ರ ಹೊಂದಿದ್ದ ಶಾಲೆಯು ಪ್ರಸ್ತುತ 1 ರಿಂದ 7ನೇ ತರಗತಿಯವರೆಗೆ ಇದ್ದು 3 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಶಿಕ್ಷಕರ ಹೆಸರು ಶ್ರೀ ರವಿ ಎಸ್.ಟಿ, ಪ್ರಕಾಶ್‌ಎಸ್. ಈಶ್ವರಪ್ಪಜಿ.ಎನ್. 2018–19ನೇ ಸಾಲಿನಲ್ಲಿ 51 ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ನಮ್ಮ ಶಾಲೆಯು ಇಷ್ಟೊಂದು ಪ್ರಗತಿಯ ಪಥದಲ್ಲಿ ಸಾಗಲು ಈ ವರೆಗೂ ಆಯ್ಕೆಯಾದ ಎಲ್ಲಾ ಎಸ್.ಡಿ.ಎಮ್.ಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಶಾಲೆಯ ಏಳಿಗೆಗಾಗಿ ಹೆಚ್ಚು ತೊಡಗಿಸಿಕೊಂಡಿರುವುದು ಹೆಮ್ಮೆಯ ಸಂಗತಿ ಪ್ರತಿವರ್ಷ ಸತ್ಯನಾರಾಯಣ ಪೂಜೆ ಮತ್ತು ಶಾಲಾ ವಾರ್ಷಿಕೋತ್ಸವವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

ಪ್ರತಿ ವರ್ಷ ಮಕ್ಕಳ ಕಲಿಕೆಗೆ ಪೂರಕವಾಗುವಂತೆ ಶೈಕ್ಷಣಿಕ ಪ್ರವಾಸ ಹಮ್ಮಿಕೊಳ್ಳುವುದು. ಸುಂದರ ಕೈತೋಟ, ಹಲವಾರು ಹೂವಿನ ಗಿಡಗಳು, ಅಲಂಕಾರಿಕ ಸಸ್ಯಗಳು, ಅನೇಕ ವಿಧದ ಫಲಗಳು, ಔಷಧಿ ಸಸ್ಯಗಳನ್ನು ಬೆಳೆಸುವುದು.

ಪ್ರತಿ ವರ್ಷ ವಲಯ ಮಟ್ಟ, ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಮಕ್ಕಳಿಗೆ ಪ್ರಶಸ್ತಿಗಳು ಬಂದಿರುತ್ತದೆ ಹಾಗೂ ಚೆಸ್ ವಿಭಾಗದಲ್ಲಿ 2 ರಿಂದ 3 ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಸ್ಪರ್ಧಿಸುತ್ತಿರುವುದು ಹೆಮ್ಮೆಯ ವಿಷಯ.

2016–17, 2017–18, 2018–19 ಈ 3 ವರ್ಷ ನಮ್ಮ ಶಾಲೆಗೆ ಹಸಿರು ಮಿತ್ರ ಶಾಲಾ ಪ್ರಶಸ್ತಿಯು ಲಭಿಸಿದೆ ಹಾಗೂ 2018–19ರಲ್ಲಿ ಧನ್ವಂತರಿ ಪ್ರಶಸ್ತಿಯೂ ಲಭಿಸಿದೆ. ಮಕ್ಕಳು ಗುರುಕುಲ ಪದ್ಧತಿಯಲ್ಲಿ ಕುಳಿತು ಓದಲು ಸುಂದರವಾದಕುಟೀರ ನಿರ್ಮಾಣವನ್ನು ಎಸ್.ಡಿ.ಎಮ್.ಸಿ ಯವರ ಸಹಭಾಗಿತ್ವದಲ್ಲಿ ಮಾಡಲಾಗಿದೆ. ವಾರದಲ್ಲಿ ಎರಡು ದಿನ ಮಕ್ಕಳಿಗೆ ಪಪ್ಪಾಯ, ಬಾಳೆಹಣ್ಣುಗಳನ್ನು ನೀಡಲಾಗುತ್ತಿದೆ.

ಶೈಕ್ಷಣಿಕ ಪ್ರಗತಿಗೆ ಪೂರಕವಾಗುವ ರೀತಿಯಲ್ಲಿನ ಯೋಜನೆಗಳಿಂದ ಹಾಗೂ ಎಲ್ಲಾ ಶಿಕ್ಷಕ ವೃಂದ ಹಾಗೂ ಎಸ್.ಡಿ.ಎಮ್.ಸಿ ಮತ್ತು ಪೋಷಕರ ಸಹಾಯದಿಂದ ನಮ್ಮ ಶಾಲೆಯು ಉತ್ತಮವಾಗಿದೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ.

## ಶಾಲೆಯ ಮುಖ್ಯದ್ವಾರ






ನಮ್ಮ ಶಾಲೆಯ ಮುಖ್ಯದ್ವಾರವನ್ನು ಅಂದಗಾಣಿಸಲು ನೆರವು ನೀಡಿದ ಗೇಟ್‌ನ ದಾನಿಗಳು ಶ್ರೀ ಕುಗಟಿ ರಮೇಶ್ ಸುಮಾರು 25,000/– ವೆಚ್ಚದಿಂದ ನಿರ್ಮಿಸಿರುತ್ತಾರೆ. ಶಾಲೆಯ ಫಲಕದ ಬೋರ್ಡ್‌ನ್ನು ಶ್ರೀ ಕಲ್ಗದ್ದೆ ಶಂಕ್ರಪ್ಪ, ಮಲೇಶಂಕರ ಇವರು ನಿರ್ಮಿಸಿ ಕೊಟ್ಟಿರುತ್ತಾರೆ.

ನಮ್ಮ ಶಾಲೆಯು ಸುಂದರವಾದ ಮುಖ್ಯ ಶಿಕ್ಷಕರ ಕೊಠಡಿಯನ್ನು ಹೊಂದಿದ್ದು, ಸುವ್ಯವಸ್ಥಿತವಾದ ಕುರ್ಚಿ, ಟೇಬಲ್‌ಗಳಿವೆ. ಈ ಕೊಠಡಿಯಲ್ಲಿ ವಿಶೇಷವಾಗಿ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ, ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರ, ಸ್ಪರ್ಧೆಯಲ್ಲಿ ಗೆದ್ದ ಶೀಲ್ಡ್‌ಗಳು, ಪರಿಸರ ಮಿತ್ರಕಾರ್ಯಕ್ರಮದ ಪ್ರಶಸ್ತಿಗಳಿಂದ ಅಲಂಕರಿಸಿದ್ದೇವೆ.

## ನಮ್ಮ ಮಕ್ಕಳು ನಮ್ಮ ಹೆಮ್ಮೆ



ನಮ್ಮ ಶಾಲೆಯು 2018–19ನೇ ಸಾಲಿನಲ್ಲಿ 1 ರಿಂದ 7ನೇ ತರಗತಿಯಲ್ಲಿ ಒಟ್ಟು 51 ವಿದ್ಯಾರ್ಥಿಗಳಿದ್ದು, ಶಾಲೆಯ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮದೇ ಆದ ಗಮನಾರ್ಹ ಸಾಧನೆ ಮಾಡಿರುತ್ತಾರೆ. ಶಾಲಾ ಸ್ವಚ್ಛತೆ ಹಾಗೂ ವೈಯಕ್ತಿಕ ಸ್ವಚ್ಛತೆಗೂ ಗಮನಹರಿಸಿದ್ದಾರೆ.

**"ಹಳೆಯದಾದರೂ ಸುಭದ್ರ ಅಂದ"**



**ನವೀನತೆ ಇರುವ ನಲಿಕಲಿ**



1967 ರಿಂದ 2019ರ ವರೆಗೆ 50 ವರ್ಷ ಪೂರೈಸಿದ ಸದರಿ ಶಾಲೆ ಹಳೆ ಕೊಠಡಿ ಇದ್ದರೂ ಸುಭದ್ರವಾಗಿದ್ದು, ಕಲಿಕೆಗೆ ಉತ್ತಮ ವಾತಾವರಣ ಹೊಂದಿದೆ.

ಸದರಿ ಶಾಲೆಯಲ್ಲಿ ಎಸ್.ಡಿ.ಎಮ್.ಸಿ ಹಾಗೂ ಗ್ರಾಮಸ್ಥರ ಸಹಕಾರದಿಂದ 20,000/– ರೂ. ವೆಚ್ಚದಲ್ಲಿ 25 ಚೇರ್, 5 ಟೇಬಲ್‌ಗಳನ್ನು ನಲಿ ಕಲಿ ಕೊಠಡಿಗೆ ಅಳವಡಿಸಲಾಗಿದೆ. ಇವು ಮಕ್ಕಳ ಕಲಿಕೆಗೆ ಪೂರಕ, ಸಂತಸದಾಯಕ ವಾತಾವರಣಕ್ಕೆ ಕಾರಣವಾಗಿದೆ.

**ಶುದ್ಧ ಕುಡಿಯುವ ನೀರಿನ ಘಟಕ**



**ಶುಚಿತ್ವ**



ನಮ್ಮ ಶಾಲೆಗೆ ಸುಮಾರು 30,000/– ರೂ.ಗಳ "ಕುಡಿಯುವ ನೀರಿನ ಘಟಕ"ವನ್ನು ದಾನಿಗಳಿಂದ ಪಡೆಯಲಾಗಿದೆ. ವಿದ್ಯಾರ್ಥಿಗಳ ಆರೋಗ್ಯ ಉತ್ತಮವಾಗಿದೆ. ಸದರಿ ಶಾಲೆಯಲ್ಲಿ ವ್ಯವಸ್ಥಿತವಾದ ಕೈತೊಳೆಯುವ ಜಾಗದ ನಿರ್ಮಾಣ ಮಾಡಲಾಗಿದೆ. ಶುಚಿತ್ವದ ಪರಿಕಲ್ಪನೆ ಮೂಡಿದೆ.

**ಕಂಪ್ಯೂಟರ್ ಮೂಲಕ ಕಲಿಕೆ**



**ಆಟದಲ್ಲಿ ನಾವೇ ಫಸ್ಟ್**



ಸದರಿ ಶಾಲೆಯಲ್ಲಿ ಎಸ್.ಡಿ.ಎಮ್.ಸಿ. ಹಾಗೂ ಗ್ರಾಮಸ್ಥರ ಸಹಕಾರದಿಂದ ಸುಮಾರು 25,000/– ರೂ.ಗಳ ವೆಚ್ಚದಲ್ಲಿ ಕಂಪ್ಯೂಟರನ್ನು 2017–18ನೇ ಸಾಲಿನಲ್ಲಿ ಖರೀದಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆ ಸಂತಸದಾಯಕವಾಗಿದೆ. ಚಿತ್ರ ಬಿಡಿಸುವುದು, ಗಣಿತ ಲೆಕ್ಕಗಳನ್ನು, ವಿಜ್ಞಾನ ಪ್ರಯೋಗವನ್ನು ಕಂಪ್ಯೂಟರ್ ಮೂಲಕ ಕಲಿಸಲಾಗುತ್ತಿದೆ.

ಪ್ರತಿ ಶೈಕ್ಷಣಿಕ ವರ್ಷ ಕ್ರೀಡಾಕೂಟದಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ 100 ಮೀ. 200 ಮೀ, 400 ಮೀ, 600 ಮೀ, ರೀಲೇ ಖೋಖೋ, ಕಬಡ್ಡಿ, ಮುಂತಾದ ಆಟಗಳಲ್ಲಿ ಗೆದ್ದು ತಾಲ್ಲೂಕು, ಜಿಲ್ಲೆಗೆ ಆಯ್ಕೆಯಾಗಿರುತ್ತಾರೆ.

**ಔಷಧಿ ವನ**



**ಪರಿಸರ ಮಿತ್ರ ತಂಡದ ಭೇಟಿ**



ಸದರಿ ಶಾಲೆಯಲ್ಲಿ ಮುಖ್ಯ ಶಿಕ್ಷಕರ ಕೊಠಡಿ ಮುಂಭಾಗದಲ್ಲಿ ಸುಮಾರು 150 ರಿಂದ 200 ಜಾತಿಯ ಔಷಧಿ ವನ ಇದೆ. ವಿಶೇಷವಾಗಿ 2018–19ನೇ ಸಾಲಿನಲ್ಲಿ "ಧನ್ವಂತರಿ ಪ್ರಶಸ್ತಿ" ಗರಿ ನಮ್ಮ ಶಾಲೆಗೆ ದೊರೆತಿದೆ.

ಸದರಿ ಶಾಲೆಯು ಪರಿಸರಕ್ಕೆ ಪೂರಕವಾದ ವಾತವಾರಣ ಹೊಂದಿದ್ದು 3 ನೇ ಬಾರಿ ಹಸಿರು ಶಾಲೆ ಪ್ರಶಸ್ತಿ ಹಾಗೂ 2018–19ನೇ ಸಾಲಿನ ಧನ್ವಂತರಿ ಪ್ರಶಸ್ತಿ ಪಡೆದುಕೊಂಡಿದೆ.

## ಚೆಂದ ಅಂದವೀ ಕುಟೀರ





ಎಸ್.ಡಿ.ಎಮ್.ಸಿ ಹಾಗೂ ಗ್ರಾಮಸ್ಥರ ಬಹುಶ್ರಮದ ಫಲದಿಂದ 20*30 ಅಡಿ ದೊಡ್ಡದಾದ ಸುಂದರ ಕುಟೀರ ನಿರ್ಮಿಸಲಾಗಿದೆ. ಶಾಲೆಯಲ್ಲಿ ತಾಜಾ ಸೊಪ್ಪುಗಳಾದ ಅರಿವೆ, ಮೆಂತ್ಯೆ, ಪಾಲಕ್. ಸಬ್ಬಸ್ಸಿಗೆ ಸೊಪ್ಪು ಬೆಳೆಯಲಾಗುತ್ತಿದೆ. ಸುಮಾರು 10 ರಿಂದ 15 ತಳಿಯ ಉತ್ತಮ ತಳಿಯ ಸಪೋಟ ಗಿಡಗಳನ್ನು, ಪಪ್ಪಾಯಿ ಗಿಡ, ಬಾಳೆ ಗಿಡಗಳನ್ನು ಬೆಳೆಯಲಾಗಿದೆ.

## ಇಂಗ್ಲೀಷ್ ಫೆಸ್ಟೀವಲ್



2018– 19ನೇ ಸಾಲಿನ ಸಿರಿಗೆರೆ ಕ್ಲಸ್ಟರ್ ಮಟ್ಟದ ಇಂಗ್ಲೀಷ್ ಫೆಸ್ಟೀವಲ್ ನಮ್ಮ ಶಾಲೆಯಲ್ಲಿ ನಡೆಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಯುತ ನಂಜಯ್ಯ, ಡಯಟ್ ಪ್ರಾಂಶುಪಾಲರು, ಶಿವಮೊಗ್ಗ. ಶ್ರೀಯುತ ಲೋಕೇಶಪ್ಪ ಕೆ.ಬಿ, ಬಿ.ಇ.ಓ, ಶಿವಮೊಗ್ಗ, ಹಾಗೂ ಶ್ರೀಯುತ ಫಣೀಶ್, ಡಯಟ್ ಹಿರಿಯ ಉಪನ್ಯಾಸಕರು, ಶಿವಮೊಗ್ಗ. ಇವರು ಭೇಟಿ ನೀಡಿ ವಿದ್ಯಾರ್ಥಿಗಳು ತಯಾರಿಸಿದ ಕಲಿಕೋಪಕರಣಗಳು ಹಾಗೂ ಮಕ್ಕಳ ಭಾಗವಹಿಸುವಿಕೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತ ಪಡಿಸಿದರು. ನಮ್ಮ ಶಾಲೆ, ನಮ್ಮ ಮಕ್ಕಳು, ನಮ್ಮ ಹೆಮ್ಮೆ ಎಂಬ ಉಕ್ತಿಯಂತೆ, ಸ.ಹಿ.ಪ್ರಾ.ಶಾಲೆ, ಮಂಜರಿಕೊಪ್ಪ ಇಂದು ಸುಂದರವಾದ, ಸಂತಸದಾಯಕ ಕಲಿಕಾ ವಾತಾವರಣವನ್ನು ಹೊಂದಿದ ಶಾಲೆಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.





ಈ ಒಂದು ಶಾಲೆಯ ಉನ್ನತಿಗೆ ಶ್ರಮಿಸುತ್ತಿರುವ ಶಿಕ್ಷಕರ ಶ್ರಮ ಅಪಾರವಾಗಿದೆ. ಉತ್ತಮ ಎಸ್.ಡಿ.ಎಮ್.ಸಿ ಶಾಲೆಯ ಬಗ್ಗೆ ಕಾಳಜಿ ಇರುವ ಸಜ್ಜನರಿಂದ ಕೂಡಿರುವ ಈ ಗ್ರಾಮಸ್ಥರ ಸಹಕಾರ ಕೊಡುಗೆ ಶಾಲೆಯನ್ನು ಉನ್ನತ ಹಂತಕ್ಕೇರಿಸಿದೆ. ನಮ್ಮ ಶಿಕ್ಷಣ ಇಲಾಖೆಯವರ ಸಹಕಾರ, ಮಾರ್ಗದರ್ಶನ, ಪ್ರೋತ್ಸಾಹ ಸದಾ ನಮಗೆ ದೊರೆಯಲಿ ಎಂದು ಆಶಿಸುತ್ತೇವೆ.

